597325/2024

# ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಕಛೇರಿ ನಡವಳಿಗಳು ದಿನಾಂಕ: 20/04/2024

ವಿಷಯ: 09 ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್‌ಗಳಿಗೆ ತಲಾ ರೂ. 1.00 ಕೋಟಿ ವೆಚ್ಚದ ಉನ್ನತೀಕರಣ ಕುರಿತು.

ಉಲ್ಲೇಖ: ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ(ಸೇವೆಗಳು-2), ಬೆಂಗಳೂರು ಇವರ ಅನಧಿಕೃತ ಟಿಪ್ಪಣಿ (Budget Advice) ಸಂಖ್ಯೆ: ಆಇ 172 ವೆಚ್ಚ- 8/2024, ದಿನಾಂಕ: 16/04/2024

***

ಸನ್ಮಾನ್ಯ ಮುಖ್ಯಮಂತ್ರಿಯವರ 2024-25ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 105 ರಲ್ಲಿ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ವಿದ್ಯಾರ್ಥಿನಿಯರ ದಾಖಲಾತಿಯನ್ನು ಹೆಚ್ಚಿಸುವ ಮೂಲಕ ಮಹಿಳೆಯರನ್ನು ಸಬಲೀಕರಣಗೊಳಿಸಲು 15 ಮಹಿಳಾ ಸರ್ಕಾರಿ ಪಾಲಿಟೆಕ್ನಿಕ್‌ಗಳು ಮತ್ತು 15 ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ತಲಾ ರೂ 1.00 ಕೋಟಿ ವೆಚ್ಚದಲ್ಲಿ ಉನ್ನತೀಕರಿಸಲು ತಿಳಿಸಲಾಗಿರುತ್ತದೆ.

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ತಾಂತ್ರಿಕ ಕೋಶದಲ್ಲಿ ಇಬ್ಬರು ಸಹಾಯಕ ಕಾರ್ಯಪಾಲಕ ಅಭಿಯಂತರರು ಮಾತ್ರ ಕಾರ್ಯನಿರ್ವಹಿಸುತ್ತಿದ್ದು, ಸದರಿಯವರು ನಿಗದಿತ ಸಮಯದಲ್ಲಿ ಎಲ್ಲಾ ಕಾಲೇಜುಗಳಿಗೆ ಭೇಟಿ ನೀಡಿ ಅವಶ್ಯವಿರುವ ಕಾಮಗಾರಿಗಳಿಗೆ ವಿಸ್ತೃತ ಯೋಜನಾ ವರದಿ (DPR) ಸಿದ್ದಪಡಿಸಿ ನೀಡಲು ಸಾಧ್ಯವಾಗುವುದಿಲ್ಲ ಮತ್ತು ಅನುಷ್ಠಾನ ಇಲಾಖೆಯವರು ಸಹ ಸಮಯಕ್ಕೆ ಸರಿಯಾಗಿ ಕಾಲೇಜಿನ ಪ್ರಾಂಶುಪಾಲರೊಂದಿಗೆ ಸಮನ್ವಯ ಸಾಧಿಸಿ ಸದರಿ ಕಾಮಗಾರಿಗಳಿಗೆ ಅಂದಾಜು ಪಟ್ಟಿ ಸಲ್ಲಿಸುವುದು ಸಾಧ್ಯವಿರುವುದಿಲ್ಲ. ಮಾನ್ಯ ಉನ್ನತ ಶಿಕ್ಷಣ ಸಚಿವರು ಹಾಗೂ ಪ್ರಧಾನ ಕಾರ್ಯದರ್ಶಿಗಳು ಈ ಯೋಜನೆಯನ್ನು ಶೀಘ್ರವಾಗಿ ಹಾಗೂ ಮಾದರಿಯಾಗಿ ಅನುಷ್ಠಾನಗೊಳಿಸಲು ನಿರ್ದೇಶನ ನೀಡಿರುತ್ತಾರೆ.

ಆದ್ದರಿಂದ ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್ ಮತ್ತು ಆಯ್ದ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಮೀಪದಲ್ಲಿರುವ ಸರ್ಕಾರಿ ಇಂಜಿನಿಯರಿಂಗ್ ಮತ್ತು ಪಾಲಿಟೆಕ್ನಿಕ್ ಕಾಲೇಜಿನ ಸಿವಿಲ್ ವಿಭಾಗದ ಉಪನ್ಯಾಸಕರುಗಳಿಗೆ ಸದರಿ ಸಂಸ್ಥೆಗಳಲ್ಲಿ ಅವಶ್ಯವಿರುವ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯ ನಿಗದಿತ ದರಪಟ್ಟಿಗೆ ಪೂರಕವಾಗಿ ವಿಸ್ತೃತ ಯೋಜನಾ ವರದಿಗಳನ್ನು (DPR) ಸಿದ್ದಪಡಿಸುವ ಮತ್ತು ಅನುಷ್ಠಾನದ ಮೇಲುಸ್ತುವಾರಿ ಜವಾಬ್ದಾರಿ ವಹಿಸಿ ಆದೇಶಿಸಿದೆ. ಅನುಬಂಧ 1 ರಲ್ಲಿ ಕಾಲೇಜುಗಳ ಮತ್ತು ಸಿವಿಲ್ ವಿಭಾಗಗಳ ವಿವರ ಲಗತ್ತಿಸಿದೆ. ಅನುಬಂಧ 2 ರಲ್ಲಿ ಆದ್ಯತೆ ಕಾಮಗಾರಿಗಳ ವಿವರ ನೀಡಿದೆ.

Signed by
Prasanna H
Date: 22-04-2024 16:37:25
ನಿರ್ದೇಶಕರು

ತಾಂತ್ರಿಕ ಶಿಕ್ಷಣ ಇಲಾಖೆ

# ಅನುಬಂಧ - 1

| ಕ್ರಮ ಸಂಖ್ಯೆ | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್ ಕಾಲೇಜುಗಳ ವಿವರ | ಯೋಜನಾ ವರದಿ ಸಿದ್ಧಪಡಿಸಲು ನಿಯೋಜಿಸಿರುವ ಕಾಲೇಜು | ಸಿವಿಲ್ ವಿಭಾಗ ಮುಖ್ಯಸ್ಥರ ವಿವರ ಮತ್ತು ದೂರವಾಣಿ |
|---|---|---|---|
| 1 | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು | ಶೀಲಾ ಎಸ್ ಕೆ 9449160723 |
| 2 | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ರಾಮನಗರ | ಸರ್ಕಾರಿ ಪಾಲಿಟೆಕ್ನಿಕ್, ರಾಮನಗರ | ಶ್ರೀನಿವಾಸ 7022807199 |
| 3 | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಮಂಗಳೂರು | ಕರ್ನಾಟಕ (ಸರ್ಕಾರಿ) ಪಾಲಿಟೆಕ್ನಿಕ್, ಮಂಗಳೂರು | ದೀಪಕ ಜಿ ತೋಳೆಕರ 7019411903 |
| 4 | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹುಬ್ಬಳ್ಳಿ | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹುಬ್ಬಳ್ಳಿ | ನಾಗರಾಜ ಬ್ಯಾಕೋಡ 9449072016 |
| 5 | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹಾಸನ | ಸರ್ಕಾರಿ ಪಾ2ಲಿಟೆಕ್ನಿಕ್, ಹಾಸನ | ಡಿ.ಕುಮಾರ್ 9448772224 |
| 6 | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹೊಳೇನರಸೀಪುರ | ಸರ್ಕಾರಿ ಪಾಲಿಟೆಕ್ನಿಕ್, ಹೊಳೇನರಸೀಪುರ | ಚಂದ್ರಕಾಂತ್ 9448342729 |
| 7 | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಕಲಬುರ್ಗಿ | ಸರ್ಕಾರಿ ಪಾಲಿಟೆಕ್ನಿಕ್, ಕಲಬುರ್ಗಿ | ಮಹಮ್ಮದ್ ಶರಿಫ್ 9986354041 |
| 8 | ಶಿವಶರಣೆ ಅಕ್ಕಮಹಾದೇವಿ ಮಹಿಳಾ ಪಾಲಿಟೆಕ್ನಿಕ್ ಶಿರಾಳಕೊಪ್ಪ | ಶಿವಶರಣೆ ಅಕ್ಕಮಹಾದೇವಿ ಮಹಿಳಾ ಪಾಲಿಟೆಕ್ನಿಕ್, ಶಿರಾಳಕೊಪ್ಪ | ರವೀಂದ್ರ ಎಸ್ ಆರ್ 9448775523 |
| 9 | ಸರ್ಕಾರಿ ಮಹಿಳಾ ವಸತಿ ಪಾಲಿಟೆಕ್ನಿಕ್, ಶಿವಮೊಗ್ಗ | ಶಿವಶರಣೆ ಅಕ್ಕಮಹಾದೇವಿ ಮಹಿಳಾ ಪಾಲಿಟೆಕ್ನಿಕ್, ಶಿರಾಳಕೊಪ್ಪ | ಶ್ರೀಧರ್ ಕೆ.ಸಿ, 8660722712 |

ನಿರ್ದೇಶಕರು

ತಾಂತ್ರಿಕ ಶಿಕ್ಷಣ ಇಲಾಖೆ

# ಅನುಬಂಧ - 2

## ವಿಸ್ತೃತ ಯೋಜನಾ ವರದಿಯನ್ನು ಸಿದ್ಧಪಡಿಸುವಾಗ ಕಾಮಗಾರಿಗಳ ಆಯ್ಕೆಯ ಆದ್ಯತಾ ಪಟ್ಟಿ:

**1) ಶೌಚಾಲಯಗಳ ನವೀಕರಣ:**

ಹಳೆಯ ಶೌಚಾಲಯಗಳ ನವೀಕರಣ ಕಾಮಗಾರಿಗಳನ್ನು ಅವಶ್ಯಕತೆ ಅನುಸಾರ ಕೈಗೊಳ್ಳುವುದು. ತೀರಾ ಅವಶ್ಯವಿದ್ದಲ್ಲಿ ಮಾತ್ರ ಹೊಸ ಶೌಚಾಲಯ ನಿರ್ಮಾಣಕ್ಕೆ ಸೂಕ್ತ ಕಾರಣಗಳೊಂದಿಗೆ ಶಿಫಾರಸ್ಸು ಮಾಡುವುದು.

**2) Menstrual Hygiene Room:**

ವಿದ್ಯಾರ್ಥಿನಿಯರಿಗೆ ಮುಟ್ಟಿನ ಸಮಯದಲ್ಲಿ ಅನುಕೂಲವಾಗುವ ಹಿನ್ನೆಲೆಯಲ್ಲಿ ಬಾಲಕಿಯರ ವಿಶ್ರಾಂತಿ ಕೊಠಡಿ (Girls Common Room) ಯಲ್ಲಿ ಈ ಕೆಳಗಿನಂತೆ ವ್ಯವಸ್ಥೆ ಮಾಡುವುದು.

1) 02 Western Commode ಅಳವಡಿಕೆ
2) ಶೌಚಾಲಯದಲ್ಲಿ Sanitary Pad Disposal Machine (Incinerator) ಅಳವಡಿಕೆ
3) Sanitary Pad vending Machine
4) 02 ಮಂಚ ಮತ್ತು ಹಾಸಿಗೆ ಅಳವಡಿಕೆ
5) ಕಿಟಕಿ ಮತ್ತು ಬಾಗಿಲುಗಳಿಗೆ ಪರದೆಗಳ ಅಳವಡಿಕೆ.
6) 04 ಕುರ್ಚಿಗಳು ಹಾಗೂ 01 ಟೇಬಲ್
7) 01 Book Rack ಅಳವಡಿಕೆ
8) Carrom & Chess Board ಒದಗಿಸುವುದು

**3) ಸಂಸ್ಥೆಯ ಕಟ್ಟಡದ ಮೇಲ್ಛಾವಣಿ ದುರಸ್ತಿ.**

**4) ವಿದ್ಯುತ್ ದುರಸ್ತಿ ಕಾಮಗಾರಿಗಳು.**

**5) ಪ್ರಯೋಗಾಲಯಗಳ ಅಭಿವೃದ್ಧಿ ಕಾಮಗಾರಿಗಳು**

**6) ಸಂಸ್ಥೆಯ ಸಂಪೂರ್ಣ ಕಟ್ಟಡಕ್ಕೆ ಬಣ್ಣ ಬಳಿಯುವ ಕಾಮಗಾರಿ**

**7) Flooring ದುರಸ್ತಿ ಕಾಮಗಾರಿಗಳು**

**8) ಕಿಟಕಿ ಹಾಗೂ ಬಾಗಿಲುಗಳ ದುರಸ್ತಿ**

**9) ವಸತಿ ನಿಲಯದ ಶೌಚಾಲಯಗಳ ನವೀಕರಣ**

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ

ಇವರಿಗೆ,

5/2024

1) ಇಲಾಖೆಯ ಎಲ್ಲಾ ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರ ಮಾಹಿತಿಗಾಗಿ ಹಾಗೂ ಮೇಲ್ಕಂಡ ಸಿವಿಲ್ ವಿಭಾಗದ ಮುಖ್ಯಸ್ಥರಿಗೆ ಆಯಾ ಪಾಲಿಟೆಕ್ನಿಕ್ ಪ್ರಾಚಾರ್ಯರ ಮುಖಾಂತರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.

2) ಕಡತಕ್ಕೆ.